# <u>ಆದಿಯಲಿ ಗಜಮುಖನ ಅರ್ಚಿಸಿ</u>

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru, page No. 173.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 02.
3. **Note:** The singer's wordings are slightly different.  But overall it is matching.

ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು

ಆವ ಬಗೆ ಕಾರ್ಯತತಿ ಸಿದ್ಧಿಗೊಳಿಸಿ

ಮೋದದಿಂ ಸಲಿಸುವ ಮನದಿಷ್ಟವ

ಸಾಧು ಜನರೆಲ್ಲ ಕೇಳಿ ಸಕಲ ಸುರರಿಂಗೆ

ಮಾಧವನೇ ನೇಮಿಸಿಪ್ಪ ಈ ಅಧಿಕಾರವ

ಆದರದಿಂದ ಅವರವರೊಳು ನಿಂದು

ಭೇದಗೊಳಿಸದೆ ಕಾರ್ಯಮಾಳ್ಪ ಪುರಂದರ ವಿಠ್ಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಆವ ಬಗೆ ಕಾರ್ಯತತಿ** = ಕೈಕೊಂಡ ಯಾವ ಕೆಲಸಗಳ ಮಾಲೆಯನ್ನಾದರೂ

**ಸಿದ್ಧಗೊಳಿಸಿ** = ಬಯಸಿದ ಫಲಗಳನ್ನು ಈಡೇರಿಸಿ

**ಮಾಧವನೇ .....** = ಗಣಪತಿಯು ತತ್ವೇಶ್ವರರಲ್ಲಿ ಒಬ್ಬ.  ಆಕಾಶಾಭಿಮಾನಿ ದೇವತೆ; ಹದಿನೆಂಟನೆಯ ಕಕ್ಷೆಯಲ್ಲಿದ್ದು ಮುಖ್ಯ ತಾತ್ವಿಕ ದೇವತೆಗಳಲ್ಲಿ ಕಡೆಯನೆನಿಸಿದ್ದಾನೆ.  ಇವನ ಅಂತರ್ಯಾಮಿಯಾಗಿ ಪರಮಾತ್ಮನೇ ಇರುವ.  ಪರಂಪರೆಯಿಂದ ಪರಮಾತ್ಮನೇ ಅವನಿಗೆ ಬಿಂಬ.

ಮಹಾ ಗಣಪತಿ ಆಕಾಶಾಭಿಮಾನಿ ದೇವತೆ. "ಓಂ ಪ. ಆಕಾಶಾತ್ಮನೇ ಮಹಾ ಗಣಪತಯೇ ನಮಃ (ತತ್ವನ್ಯಾಸ)". ವಿಶ್ವ ನಾಮಕ ಪರಮಾತ್ಮನೇ ಅವನ ಅಂತರ್ಯಾಮಿ. ಈ ವಿಶ್ವನು ಗಜಮುಖನು. ಈ ವಿಶ್ವನ ವಿಶೇಷ ಉಪಾಸನೆ ಮಾಡಿರುವುದರಿಂದಲೇ ಗಣಪತಿ ಗಜಮುಖನಾಗಿರುವನು. "ವಿನಾಯಕಸ್ತು ವಿಶ್ವಸ್ಯ ಧ್ಯಾನಾದ್ವೈದ್ಗಜ ವಕ್ತ್ರತಾಂ" ಎಂಬ ಮಹಾಯೋಗದ ವಚನವನ್ನು ಪ್ರಮಾಣ ಕೊಟ್ಟು ಮಾಂಡೂಕ್ಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಈ ವಿಷಯ ನಿರೂಪಿಸಿರುವರು. ಗಣಪತಿಯ ಸೇವೆಯಿಂದ ವಿಘ್ನಗಳ ಪರಿಹಾರವಾಗಿ ತ್ವರೆಯಿಂದಲೇ ಇಷ್ಟಾರ್ಥಗಳು ಲಭಿಸುವುವು. ಶ್ರೀಮದಾಚಾರ್ಯರು "ಧ್ಯೇಯೋ ವಿಘ್ನಹರಃ ಕಾಮದಾಸ್ತ್ವದಾರಾಯ ಹ್ಯಯಂ" (ತಂತ್ರಸಾರ) ಹೇಳಿರುವರು. ಆದ್ದರಿಂದಲೇ "ಸರ್ವ ವಿಘ್ನ ಹರಸ್ತಸ್ಮೈ ಮಹಾಗಣಾಧಿಪತಯೇ ನಮಃ" ಎಂದು ಪ್ರಸಿದ್ಧವಾಗಿದೆ.

**Classification:** Ugabhoga
**Ankita:** purandara vittala
**Location:** NA
**Category:** Mahatmya Jnana, Devata Stuti, Ganesha Stuti
**Sub-Category:** ganesha, gaja, archane, sadhu, jana, sura, Madhava,
**Pravachana:** NA
**Explanation:** Sou. Chetana V Kulkarni